**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 07 ಗ್ರಾಪಸ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:30-08-2018

**ಸುತ್ತೋಲೆ**

ವಿಷಯ: 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ಪೂರೈಸಬೇಕಾದ ಷರತ್ತುಗಳ ಕುರಿತು.

ಉಲ್ಲೇಖ: 1. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ:N-11011/4/2017-FD, ದಿನಾಂಕ:19-01-2018.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 03 ಗ್ರಾಪಸ 2017, ದಿನಾಂಕ:24-01-2018.

*****

14ನೇ ಹಣಕಾಸು ಆಯೋಗ ಅನುದಾನದ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ. ಉಲ್ಲೇಖ (1)ರ ಅರೆ ಸರ್ಕಾರಿ ಪತ್ರದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವಂತಹ ಮಾರ್ಗಸೂಚಿಗಳ ಪ್ರಕಾರವೇ ಗ್ರಾಮ ಪಂಚಾಯತಿಗಳು ಈ ಕೆಳಕಂಡ ನಾಲ್ಕು ಷರತ್ತುಗಳನ್ನು ಪೂರೈಸಬೇಕಾಗಿರುಗುತ್ತದೆ.

- ಗ್ರಾಮ ಪಂಚಾಯತಿಗಳು ಕಾರ್ಯಕ್ಷಮತೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸುವ ಸಾಲಿನ ಎರಡು ವರ್ಷಗಳ ಹಿಂದಿನ ಲೆಕ್ಕ ಪರಿಶೋಧಿತಾ ವಾರ್ಷಿಕ ಲೆಕ್ಕ ವರದಿ (2016-17)ಗಳನ್ನು ಸಲ್ಲಿಸಿರಬೇಕು.
- 2017-18ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನವನ್ನು ಉಪಯೋಗಿಸಿಕೊಳ್ಳಲು ಕ್ರಿಯಾಯೋಜನೆಯನ್ನು ತಯಾರಿಸುವುದು ಹಾಗೂ ಸದರಿ ಕ್ರಿಯಾಯೋಜನೆಯು "ನಮ್ಮ ಗ್ರಾಮ ನಮ್ಮ ಯೋಜನೆ"ಯ ಭಾಗವಾಗಿರಬೇಕು.
- 2017-18ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನದ ಘಟಕವಾರು ವೆಚ್ಚಗಳ ಮಾಹಿತಿಯನ್ನು FFC dash board (http://ffconline.gov.in/)ಎಂಬ URLನ online ನಲ್ಲಿ ನಮೂದಿಸಿರಬೇಕು.
- ಗ್ರಾಮ ಪಂಚಾಯತಿಗಳು ವಾರ್ಷಿಕ ಲೆಕ್ಕ ವರದಿಯಲ್ಲಿ ತೋರಿಸಿರುವಂತೆ ಅದರ ಹಿಂದಿನ ವರ್ಷಕ್ಕಿಂತ ಆ ಸಾಲಿನಲ್ಲಿ (2015-16 & 2016-17) ತನ್ನ ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಂಡಿರಬೇಕು ಮತ್ತು ಬಯಲು ಶೌಚ ಮುಕ್ತ ಗ್ರಾಮ ಪಂಚಾಯತಿಯಾಗಿರಬೇಕು ಹಾಗೂ 0-2 ವರ್ಷದ ಮಗುವಿನ ಪ್ರತಿರಕ್ಷಣೆ (Child immunisation) ಆಗಿರಬೇಕು.

2017-18ನೇ ಸಾಲಿನಿಂದ 2019-20ನೇ ಸಾಲಿನವರೆವಿಗೂ 14ನೇ ಹಣಕಾಸು ಆಯೋಗ ಅನುದಾನದ ಕಾರ್ಯಕ್ಷಮತೆ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸುವ ಮಾನದಂಡಗಳು ಈ ಕೆಳಕಂಡಂತೆ ಮೌಲ್ಯಮಾಪನ ಮಾಡಬೇಕಾಗಿರುತ್ತದೆ.

2. ಮೇಲೆ ತಿಳಿಸಿದ ನಾಲ್ಕು ಮಾನದಂಡಗಳನ್ನು ಸಂಪೂರ್ಣವಾಗಿ ಪೂರೈಸಿದ ಗ್ರಾಮ ಪಂಚಾಯತಿಗಳ ಮೌಲ್ಯಮಾಪನವನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಸ್ಕೋರಿಂಗ್ ವ್ಯವಸ್ಥೆಯ ಪ್ರಕಾರ ಕೈಗೊಳ್ಳಲಾಗುವುದು.

| ಕ್ರಸಂ | ಮಾನದಂಡ (ಹಣಕಾಸು ವರ್ಷದಂತೆ ತೆಗೆದುಕೊಳ್ಳಬೇಕಾದ ವರ್ಷ) | ಪ್ರಾಮುಖ್ಯತೆ |
|---|---|---|
| i | ಸ್ವಂತ ಸಂಪನ್ಮೂಲ (OSR) ಕ್ವಾಂಟಮ್‌ನಲ್ಲಿ ಹೆಚ್ಚಳ | ಅಂಕ |
| | >0 ಯಿಂದ 10% | 05 |
| | >10 ಯಿಂದ 25% | 10 |
| | >25 ಯಿಂದ 50% | 15 |
| | >50% | 20 |
| ii | ಗ್ರಾಮ ಪಂಚಾಯತಿಗಳು ವಾರ್ಷಿಕ ಲೆಕ್ಕ ವರದಿಯಲ್ಲಿ ತೋರಿಸಿರುವಂತೆ, ಕಾರ್ಯಕ್ಷಮತೆ ಅನುದಾನವನ್ನು ಪಡೆಯುವ ಆರ್ಥಿಕ ವರ್ಷಕ್ಕೆ(2018-19) ಸ್ವಂತ ಸಂಪನ್ಮೂಲ (OSR) ಕ್ವಾಂಟಮ್‌ನ್ನು ಹಿಂದಿನ ಆರ್ಥಿಕ ವರ್ಷದ ಪಡೆದಿರುವ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನಕ್ಕಿಂತ ಹೆಚ್ಚಾಗಿರಬೇಕು. | ಅಂಕ |
| | >0 ಯಿಂದ 10% | 15 |
| | >10 ಯಿಂದ 20% | 20 |
| | >20 ಯಿಂದ 30% | 30 |
| | >30% | 40 |
| iii | ಹಿಂದಿನ ಆರ್ಥಿಕ ವರ್ಷದಲ್ಲಿ ಗ್ರಾಮ ಪಂಚಾಯತಿಯು ಬಯಲು ಶೌಚ ಮುಕ್ತ ಹೊಂದಿದೆಯೇ?*<br>- ಹೌದು<br>- ಇಲ್ಲ | <br><br>30<br>0 |
| iv | ಕಾರ್ಯಕ್ಷಮತೆ ಅನುದಾನವನ್ನು ಪಡೆಯುವ ಆರ್ಥಿಕ ವರ್ಷಕ್ಕೆ(2018-19) ಹಿಂದಿನ ಆರ್ಥಿಕ ವರ್ಷದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 0-2 ವರ್ಷದ ಮಗುವಿನ ಪೂರ್ಣ ಪ್ರತಿರಕ್ಷಣೆ (Child immunisation) ಆಗಿದೆಯೇ?<br>- ಹೌದು<br>- ಇಲ್ಲ | 10<br>0 |
| v | ಒಟ್ಟು ಗರಿಷ್ಠ ಅಂಕ (i+ii+iii+iv) ಮೇಲೆ ತಿಳಿಸಿದಂತೆ | 100 |

* Sustainability of ODF status from next year will be criteria for GPs having become ODF in the year

**3. ಕಾರ್ಯಕ್ಷಮತೆ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸುವ ವಿಧಾನ.**

ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ವಿವರಗಳ ಪ್ರಕಾರ ಗ್ರಾಮ ಪಂಚಾಯತಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ಕಾರ್ಯಕ್ಷಮತೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

| ಅಂಕ | ಕಾರ್ಯಕ್ಷಮತೆ ಅನುದಾನದ ಅರ್ಹ ಕ್ವಾಂಟಮ್ |
|---|---|
| 49ರವರೆಗೆ | 50% ಹಂಚಿಕೆ |
| 50 ಯಿಂದ 60 | 70% ಹಂಚಿಕೆ |
| 61 ಯಿಂದ 70 | 80% ಹಂಚಿಕೆ |
| 71 ಮತ್ತು ಮೇಲ್ಪಟ್ಟ | 100% ಹಂಚಿಕೆ |

**ಕಾರ್ಯವಿಧಾನ**

1. 2018-19ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2016-17ನೇ ಸಾಲಿನ ಪರಿಶೋಧಿತಾ ವಾರ್ಷಿಕ ಲೆಕ್ಕ ವರದಿಯನ್ನು ಸಲ್ಲಿಸಿರಬೇಕು.
2. ಲೆಕ್ಕ ಪರಿಶೋಧನಾ ವಾರ್ಷಿಕ ಲೆಕ್ಕ ವರದಿ ಅಂದರೆ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲವು ಗ್ರಾಮ ಪಂಚಾಯತಿಯ ಲೆಕ್ಕ ಪರಿಶೋಧನೆ ಮಾಡಿ ಸಲ್ಲಿಸಿರುವ ವರದಿಯಾಗಿರುತ್ತದೆ.

3. ಗ್ರಾಮ ಪಂಚಾಯತಿಯ ಸ್ವಂತ ಸಂಪನ್ಮೂಲ ಎಂದರೆ, ಗ್ರಾಮ ಪಂಚಾಯತಿಗಳು ಆ ವರ್ಷದಲ್ಲಿ ಇರುವ ಬೇಡಿಕೆಗೆ ಎದುರು ಸಂಗ್ರಹ ಮಾಡಿರುವಂತಹ ಎಲ್ಲಾ ಮೂಲದ ತೆರಿಗೆ ಮತ್ತು ತೆರಿಗೇತರ ಹಾಗೂ ಸ್ವಂತ ಆದಾಯವಾಗಿರುತ್ತದೆ.

4. ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವುದು ಎಂದರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 199 ಅನುಸೂಚಿ 4ರಲ್ಲಿ ನಿರ್ದಿಷ್ಟಪಡಿಸಿರುವ ತೆರಿಗೆ ಸಂಗ್ರಹ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 70ರಡಿಯಲ್ಲಿ ಲೈಸೆನ್ಸ್ ಫೀಗಳು ಮತ್ತು ಸ್ವಂತ ಆಸ್ತಿಯಿಂದ ಬರಬಹುದಾದ ಬಾಡಿಗೆ ಮಾತ್ರ ಉದಾಹರಣೆ:2018–19ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2016–17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸುವುದು. 2019–20ನೇ ಸಾಲಿನ ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸುವುದು. ಇದೇ ರೀತಿ ಅನುಕ್ರಮವಾಗಿಸುವುದು.

5. ಜಿಲ್ಲಾ ಪಂಚಾಯತಿಗಳು ಗ್ರಾಮ ಪಂಚಾಯತಿಯ ಮಾಹಿತಿಯನ್ನು ಈ ಮಾರ್ಗಸೂಚಿಗೆ ಲಗತ್ತಿಸಿರುವಂತಹ ಅನುಬಂಧ–1ರ ನಮೂನೆಯಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ ಮಾಹೆಯ ಅಂತ್ಯದವರೆಗೆ ಕ್ರೋಢೀಕರಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಸರ್ಕಾರದ ಹಂತದಲ್ಲಿ ಎಲ್ಲಾ ಜಿಲ್ಲೆಗಳ ಪ್ರಸ್ತಾನೆಗಳನ್ನು ಒಟ್ಟು ಗೂಡಿಸಿ, ಅಕ್ಟೋಬರ್ ಮಾಹೆಯೊಳಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

6. ಮೇಲಿನ ಸೂಚನೆಗಳು 2018–19ನೇ ಸಾಲಿನಿಂದ 2019–20ನೇ ಸಾಲಿನವರೆವಿಗೂ ಅಂದರೆ 14ನೇ ಹಣಕಾಸು ಆಯೋಗ ಅನುದಾನದ ಅವಧಿಯವರೆಗೆ ಇರುತ್ತದೆ.

7. 14ನೇ ಹಣಕಾಸು ಆಯೋಗ ಅನುದಾನದ ಕಾರ್ಯಕ್ಷಮತೆ ಅನುದಾನವನ್ನು ಭಾರತ ಸರ್ಕಾರದ ವಿತ್ತಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳ ಪತ್ರ ಸಂಖ್ಯೆ: 13(32) ಎಫ್‌ಎಫ್‌ಸಿ/ ಎಫ್‌ಸಿಡಿ/2015-16, ದಿನಾಂಕ:08–10–2015 ಹಾಗೂ ಇದಕ್ಕೆ ಅನುಗುಣವಾಗಿ ಹೊರಡಿಸಿರುವ ರಾಜ್ಯ ಸರ್ಕಾರದ ಮಾರ್ಗಸೂಚಿಗಳ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ:03–02–2018ರಲ್ಲಿ ತಿಳಿಸಿರುವಂತೆ ಉಪಯೋಗಿಸಿಕೊಳ್ಳತಕ್ಕದ್ದು.

8. 14ನೇ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನವನ್ನು ಅರ್ಹ ಗ್ರಾಮ ಪಂಚಾಯತಿಗಳಿಗೆ ಹಂಚಿಕೆ ಮಾಡುವುದು. ಹಂಚಿಕೆ ಮಾಡಿ ಉಳಿದ ಅನುದಾನವನ್ನು, ಕಾರ್ಯಕ್ಷಮತೆ ಅನುದಾನವನ್ನು ಪಡೆಯಲು ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಿದ ಗ್ರಾಮ ಪಂಚಾಯತಿಗಳಿಗೆ ಸರಿಸಮಾನವಾಗಿ ಹಂಚಲಾಗುವುದು.

[signature] 20/8/18

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್–2)(ಪ್ರ) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

20.8.18

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
3. ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
3. ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.

4. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಆಯೋಗ ಕೋಶ, ಆರ್ಥಿಕ ಇಲಾಖೆರವರ ಆಪ್ತ ಸಹಾಯಕರು.
5. ನಿರ್ದೇಶಕರು (ಪಂ.ರಾಜ್-1 ಮತ್ತು 2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರುರವರ ಆಪ್ತ ಸಹಾಯಕರು.
7. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
8. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
9. ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಅನುಬಂಧ-1

ಜಿಲ್ಲೆ ತಾಲ್ಲೂಕು (ರೂ.ಗಳಲ್ಲಿ)

| ಕ್ರ.ಸಂ | ಗ್ರಾಮ ಪಂಚಾಯತಿ ಹೆಸರು | ಕಟ್ಟಡ ಮತ್ತು ನಿವೇಶನಗಳು | | ನೀರಿನ ತೆರಿಗೆ | | ಕಟ್ಟಡ ನಿರ್ಮಾಣ ಪರವಾನಿಗೆ ಶುಲ್ಕ | | ಬಾಡಿಗೆ ಮತ್ತು ಇತರೆ ಮೂಲಗಳಿಂದ | | ವ್ಯಾಪಾರಿ ಸಂಸ್ಥೆಗಳ ಪರವಾನಿಗೆ ಶುಲ್ಕ | | ಒಟ್ಟು | | ಲೆಕ್ಕ ಪರಿಶೋಧಿತ ವಾರ್ಷಿಕ ಲೆಕ್ಕ ವರದಿ ಪೂರ್ಣಗೊಂಡಿದೆಯೇ?(2016-17) | | ಗ್ರಾಮ ಪಂಚಾಯತಿಯು ಬಯಲು ಶೌಚ ಮುಕ್ತವಾಗಿದೆಯೇ? | | 2 ವರ್ಷ ಮಗುವಿನ ಮಕ್ಕಳ ಪ್ರತಿರಕ್ಷಣೆ ಸ್ಥಿತಿ (Child Immunization Status) | | FFC ಡ್ಯಾಶ್‌ಬೋರ್ಡ್ ನಲ್ಲಿ 2017-18ನೇ ಸಾಲಿನ ಘಟಕವಾರು ವೆಚ್ಚವನ್ನು ನಮೂದಿಸಲಾಗಿದೆಯೇ? | | 2018-19ನೇ ಸಾಲಿನ ನಮ್ಮ ಗ್ರಾಮ ನಮ್ಮ ಯೋಜನೆಯನ್ನು ತಯಾರಿಸಲಾಗಿದೆಯೇ? | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 2015-16 | 2016-17 | 2015-16 | 2016-17 | 2015-16 | 2016-17 | 2015-16 | 2016-17 | 2015-16 | 2016-17 | 2015-16 | 2016-17 | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್